

## ಯಜಮಾನಿ ಬರುತ್ತಿದ್ದಾಳೆ...

ಬೇಸಿಗೆ ರಜೆಯ ಒಂದು ದಿನ ನಿಧಾನವಾಗಿ ಎದ್ದು ಕಾಫಿ ಕುಡಿಯುತ್ತ, ಪತ್ರಿಕೆ ಓದುತ್ತಾ ಕುಳಿತಿದ್ದೆ. ನನ್ನಾಕೆ ಮನೆಯಂಗಳದಲ್ಲಿ ಗಿಡಗಳಿಗೆ ನೀರು ಹಾಕುತ್ತಾ ಇದ್ದಳು. ಆಗ ಇದ್ದಕ್ಕಿದ್ದಂತೆ ಆಕೆ 'ನೋಡ್ರಿ ನಿಮ್ಮ ಮನೆ ಯಜಮಾನಿ ಬರ್ತಿದ್ದಾಳೆ' ಎಂದು ನಸುನಗುತ್ತಾ ಹೇಳಿದಳು. ನನಗೋ ಹಿಂದೆ ಮುಂದೆ ಒಂದೂ ತಿಳಿಯಲಿಲ್ಲ. ನನ್ನಾಕೆಗೆ ಏನಾದರೂ ಆಗಿದೆಯಾ ಎಂದು ಸಂಶಯಪಟ್ಟೆ.

ಕುತೂಹಲ ಹಾಗೂ ಸಂದೇಹದಿಂದ ಮನೆಯಂಗಳಕ್ಕೆ ಬಂದರೆ ನನ್ನಾಕೆ ತೋರಿಸಿದ್ದು ಗೇಟಿನ ಹತ್ತಿರ ಬಂದ ನನ್ನ ಚಡ್ಡಿದೋಸ್ತ ಮಹೇಶನನ್ನು.

ವಿಷಯ ಇಷ್ಟೇ: ನಾವು ಪ್ರೌಢಶಾಲೆಯಲ್ಲಿದ್ದಾಗ ಪ್ರದರ್ಶನಗೊಂಡ ನಾಟಕವೊಂದರಲ್ಲಿ ನಾನು ಗಂಡನಾಗಿ ಹಾಗೂ ಮಹೇಶ ಹೆಂಡತಿಯಾಗಿ ಪಾತ್ರ ನಿರ್ವಹಿಸಿದ್ದ. ಅದನ್ನು ನನ್ನಾಕೆಗೆ ಹೇಳಿದ್ದೆ. ಅದಕ್ಕೇ ನನ್ನ ಹೆಂಡತಿ ಮಹೇಶನನ್ನು 'ಯಜಮಾನಿ' ಮಾಡಿದ್ದಳು!

**ಪಿ.ಕೆ. ಕುಲಕರ್ಣಿ, ಶಹಾಪುರ**

## ಇಲ್ಲಿಗೇ ತನ್ನಿ!



ಅಂದು ರವಿವಾರ. ನನ್ನ ಮಿತ್ರ ನಮ್ಮ ಮನೆಗೆ ಬಂದಿದ್ದ. ಎಲ್.ಕೆ.ಜಿ.ಯಲ್ಲಿ ಓದುತ್ತಿದ್ದ ನನ್ನ ಮೊಮ್ಮಗಳು ಗೌರಿ, ಮನೆಯಲ್ಲಿ ಸಾಕಿದ ಬೆಕ್ಕಿನ ಜೊತೆ ಆಟವಾಡುತ್ತಿದ್ದಳು. ಅದು ತನ್ನ ಬಾಲ ನಿಮಿರಿಸುತ್ತಾ, ಅವಳ ಮೈ ಸವರುತ್ತಾ, 'ಮಿಯಾಂವ್' ಅನ್ನುತ್ತಾ, ಅವಳ ಮನ ರಂಜಿಸುತ್ತಿತ್ತು. ಇದನ್ನು ಗಮನಿಸಿದ ನನ್ನ ಮಿತ್ರ 'ಗೌರಿ, ನಮ್ಮ ಮನೇಲಿ ಬಹಳ ಇಲಿಗಳಿವೆ. ಈ ಬೆಕ್ಕನ್ನು ಎರಡು ದಿನಗಳ ಮಟ್ಟಿಗೆ ಕೊಡು. ನನ್ನ ಮನೆಗೆ ಒಯ್ಯುತ್ತೇನೆ' ಅಂದ. 'ಬೇಡ, ನಾನು ಬೆಕ್ಕನ್ನು ಕೊಡೋದಿಲ್ಲ! ನೀವೇ ನಿಮ್ಮ ಇಲಿಗಳನ್ನು ಇಲ್ಲಿಗೆ ತಗೊಂಬನ್ನಿ' ಎಂದು ಅನ್ನುತ್ತಾ ಬೆಕ್ಕನ್ನು ಅಪ್ಪಿಕೊಂಡಳು. ಅವಳ ಮಾತನ್ನು ಕೇಳಿ, ನಮಗೆ ನಗೆ ತಡೆಯೋಕೆ ಆಗಲಿಲ್ಲ.

**ಕೆ.ಜಿ. ಭದ್ರಣ್ಣವರ, ಮುದ್ದೇಬಿಹಾಳ**



ಚಿತ್ರಗಳು: ಗಣೇಶ್ ಆಚಾರ್ಯ